## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀಮತಿ ಸಾವಿತ್ರಿ ಸಿದ್ದನಗೌಡ ಬಿರಾದಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೂವಿನ ಹಿಪ್ಪರಗಿ ಗ್ರಾಮ ಪಂಚಾಯತಿ, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 732 ಗ್ರಾಪಂಕಾ 2016, ದಿನಾಂಕ: 15.12.2016.
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. ಉಪಲೋಕ್-1/ಡಿಇ/39/2017/ಎಆರ್ಇ-10, ದಿನಾಂಕ: 05.02.2018.
3) ಸರ್ಕಾರದ ಸಮಸಂಖ್ಯೆಯ ಎರಡನೇ ಕಾರಣ ಕೇಳಿ ನೋಟೀಸ್, ದಿನಾಂಕ 03.03.2018.
4) ಶ್ರೀಮತಿ ಸಾವಿತ್ರಿ ಸಿದ್ದನಗೌಡ ಬಿರಾದಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೂವಿನ ಹಿಪ್ಪರಗಿ ಗ್ರಾಮ ಪಂಚಾಯತಿ, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಉತ್ತರ, ದಿನಾಂಕ 23.04.2018.

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, ಶ್ರೀಮತಿ ಸಾವಿತ್ರಿ ಸಿದ್ದನಗೌಡ ಬಿರಾದಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೂವಿನ ಹಿಪ್ಪರಗಿ ಗ್ರಾಮ ಪಂಚಾಯತಿ, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ವಿರುದ್ಧ ಕೆಳಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

> "ಆಪಾದಿತ ಸರ್ಕಾರಿ ನೌಕರರು – ಶ್ರೀಮತಿ ಸಾವಿತ್ರಿ ಸಿದ್ದನಗೌಡ ಬಿರಾದಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೂವಿನ ಹಿಪ್ಪರಗಿ ಗ್ರಾಮ ಪಂಚಾಯತಿ, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಆದ ನೀವು 2010–13ನೇ ಸಾಲಿನ ವಸತಿ ಯೋಜನೆಯಡಿ ಶ್ರೀಮತಿ ಶಾರದಾ ಬಾಯಿ, ಶ್ರೀಮತಿ ಲಕ್ಷ್ಮೀ ಬಾಯಿ, ಶ್ರೀ ಶಂಕರಪ್ಪ ಬಸಪ್ಪ ಬಿ.ಪಾಟೀಲ, ಶ್ರೀ ವಾಲೀಕಾರ, ಶ್ರೀ ತ್ವಾಚಪ್ಪ, ಶ್ರೀ ಎಲಗೂಳದಪ್ಪ ಒಳಸಂಗಿ, ಶ್ರೀಮತಿ ಧಾಮವ್ವ ಶಂಕರಪ್ಪ ಜಾಲವಾದಿ, ಶ್ರೀಮತಿ ಬಿ.ಬಿ ಫಾತಿಮ್ ಅಬ್ದುಲ್ ರಜಾಕ್ ಇವರುಗಳೆಲ್ಲರಿಗೂ ಮನೆ ಇದ್ದರೂ ಸಹ ಇವರುಗಳನ್ನು ಫಲಾನುಭವಿಗಳನ್ನಾಗಿ ಆಯ್ಕೆ ಮಾಡಿ, ಮನೆಗಳನ್ನು ಮಂಜೂರು ಮಾಡಿರುತ್ತೀರಿ.
>
> 2007–08ನೇ ಸಾಲಿನಲ್ಲಿ ದೋಬಿಘಾಟ್ ಮತ್ತು ನೀರಿನ ಟ್ಯಾಂಕ್ ಅನ್ನು ಕಟ್ಟಿಸಿದ್ದು ಅದನ್ನು ಉಪಯೋಗಿಸದೇ ಇದ್ದು ಪಾಳು ಬಿದ್ದಿರುವುದರಿಂದ ಸರ್ಕಾರಕ್ಕೆ ರೂ.1.20 ಲಕ್ಷ ನಷ್ಟವನ್ನು ಉಂಟು ಮಾಡಿರುತ್ತೀರಿ.
>
> ಅಂದಾಜು ಪಟ್ಟಿಯಲ್ಲಿ "administratively approved under No: Date" ಎಂದು ಇರುವ ಕಾಲಂನಲ್ಲಿ ಯಾವುದೇ ಮಾಹಿತಿಯನ್ನು ತುಂಬಿರುವುದಿಲ್ಲ. ಇದಕ್ಕೆ ಸಂಬಂಧಿಸಿದ ಅಳತೆ ಪುಸ್ತಕದಲ್ಲಿ ಅಳತೆಯನ್ನು ಇಂಜಿನಿಯರ್ ರವರು ಪರಿಶೀಲಿಸಿ, ಅನುಮೋದಿಸಿರುವುದು ಕಂಡು ಬರುವುದಿಲ್ಲ.
>
> ಶ್ರೀ ಅಸ್ತಿ ಇವರ ಮನೆಯಿಂದ ಶ್ರೀ ಹಜೇರಿಯರವರ ಮನೆಯವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣದ ಬಗ್ಗೆ ಅಂದಾಜು ಪಟ್ಟಿಯನ್ನು ಹಾಜರುಪಡಿಸಿದ್ದು, ಅಂದಾಜು ಪಟ್ಟಿಯಲ್ಲಿ ಆಡಳಿತಾತ್ಮಕ ಅನುಮೋದನೆಯ ಆದೇಶದ ಬಗ್ಗೆಯಾಗಲೀ, ತಾಂತ್ರಿಕ ಮಂಜೂರಾತಿ ಆದೇಶ ಬಗ್ಗೆಯಾಗಲೀ ಉಲ್ಲೇಖವಿರುವುದಿಲ್ಲ.
>
> ಗಣಪತಿ ಚೌಕದಿಂದ ಕೆ.ಸಾಲವಾಡಗಿ ರಸ್ತೆವರೆಗೆ ಸಿ.ಸಿ ರಸ್ತೆಯನ್ನು ನಿರ್ಮಿಸಿರುವ ಆದೇಶದ ಪ್ರತಿಯಲ್ಲಿ ದಿನಾಂಕವನ್ನು ಖಾಲಿ ಬಿಟ್ಟಿರುತ್ತೀರಿ.
>
> ಅಂದಾಜು ಪಟ್ಟಿಯ ಮುಖಪುಟದಲ್ಲಿ ಆಡಳಿತಾತ್ಮಕ ಮಂಜೂರಾತಿಯ ಹಾಗೂ ತಾಂತ್ರಿಕ ಮಂಜೂರಾತಿಯ ಬಗ್ಗೆ ಯಾವುದೇ ಉಲ್ಲೇಖವಿಲ್ಲ.
>
> ಶ್ರೀ ಬಸವರಾಜ್ ನಂದಿ ಯವರ ಮನೆಯಿಂದ ಮುದ್ದೇಬಿಹಾಳ್ ರಸ್ತೆವರೆಗಿನ ಸಿಸಿ ರಸ್ತೆ ನಿರ್ಮಾಣದ ಬಗ್ಗೆ ಅಂದಾಜು ಪಟ್ಟಿಯನ್ನು ಹಾಜರುಪಡಿಸಲಾಗಿದ್ದು, ಸದರಿ ಅಂದಾಜು ಪಟ್ಟಿಯ ಮುಖಪುಟದಲ್ಲಿ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ಬಗ್ಗೆ ಉಲ್ಲೇಖವಿರುವುದಿಲ್ಲ. ಅಳತೆ ಪುಸ್ತಕವನ್ನು ಯಾವುದೇ ಅಭಿಯಂತರರು ಪರಿಶೀಲಿಸಿರುವುದಿಲ್ಲ.
>
> ಆದ ಕಾರಣ, ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ"

.....2

ಮೇಲೆ ಓದಲಾದ (2) ರಲ್ಲಿ, ತನಿಖಾಧಿಕಾರಿಗಳಾದ ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ಇವರು ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಉಪಲೋಕಾಯುಕ್ತರು ದಿನಾಂಕ: **02.02.2018** ರ ವರದಿಯಲ್ಲಿ ಶ್ರೀಮತಿ ಸಾವಿತ್ರಿ ಸಿದ್ದನಗೌಡ ಬಿರಾದಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೂವಿನ ಹಿಪ್ಪರಗಿ ಗ್ರಾಮ ಪಂಚಾಯತಿ, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ, ರೂ.1,20,000/- ಗಳ ಆರ್ಥಿಕ ನಷ್ಟವನ್ನು ಸದರಿ ನೌಕರರ ವೇತನ ಹಾಗೂ ಭತ್ಯೆಗಳಿಂದ ವಸೂಲು ಮಾಡುವ ಮತ್ತು ಸದರಿಯವರಿಗೆ ಬಡ್ತಿ ಕೊಡುವ ಸಮಯದಿಂದ ನಾಲ್ಕು ವರ್ಷಗಳ ಅವಧಿಗೆ ಅವರ ಬಡ್ತಿಯನ್ನು ತಡೆಹಿಡಿಯುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ಪ್ರಕರಣದ ಸಂಬಂಧ ಮಾನ್ಯ ಉಪಲೋಕಾಯುಕ್ತರು ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಸದರಿ ನೌಕರರಿಗೆ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು.

ಮೇಲೆ ಓದಲಾದ (4) ರಲ್ಲಿ ಆರೋಪಿತ ನೌಕರರು ಎರಡನೇ ಕಾರಣ ಕೇಳುವ ನೋಟೀಸಿಗೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

- ಹಿಪ್ಪರಗಿ ಗ್ರಾಮ ಪಂಚಾಯತಿಯಲ್ಲಿ ನನ್ನ ಕರ್ತವ್ಯದ ಅವಧಿ ದಿ:27.11.2012 ರಿಂದ 10.06.2014 ರವರೆಗೆ ಮಾತ್ರ ಇರುತ್ತದೆ. ಇದನ್ನು ವಿಚಾರಣಾ ವೇಳೆಯಲ್ಲಿ ಅಪರ ನಿಬಂಧಕರ ಗಮನಕ್ಕೆ ತಂದರೂ, ಮಾಡದ ಕೃತ್ಯಕ್ಕೆ ರೂ **1,20,000/-** ವಸೂಲಾತಿ ಸೂಚಿಸಿ ಅನ್ಯಾಯ ಮಾಡಲಾಗಿದೆ.
- ವಸತಿ ಯೋಜನೆಗೆ ಸಂಬಂಧಿಸಿದಂತೆ 2010 ರಿಂದ 2013 ರವರೆಗೆ 8 ಅನರ್ಹ ಫಲಾನುಭವಿಗಳಾದ ಶ್ರೀಮತಿ ಶಾರದಾ ಬಾಯಿ, ಶ್ರೀಮತಿ ಲಕ್ಷ್ಮೀಬಾಯಿ, ಶ್ರೀ ಶಂಕ್ರಪ್ಪ ಬಸಪ್ಪ ಬಿ ಪಾಟಿಲ್, ಶ್ರೀ ವಾಲಿಕಾರ, ಶ್ರೀ ತಾಚಪ್ಪ, ಶ್ರೀ ಯಲಗುರದಪ್ಪಾ ಒಳಸಂಗಿ, ಶ್ರೀಮತಿ ರಾಮವ್ವ ಶಂಕ್ರಪ್ಪ ಜಾಲವಾದಿ, ಶ್ರೀಮತಿ ಬಿ.ಬಿ ಫಾತೀಮಾ ಅಬ್ದುಲ್ ರಜಾಕ್ ರವರಿಗೆ ಮನೆಯಿದ್ದರೂ ಫಲಾನುಭವಿಗಳಾಗಿ ಆಯ್ಕೆ ಮಾಡಿರುವುದಾಗಿ ಆರೋಪಿಸಲಾಗಿದೆ. ಹೂವಿನ ಹಿಪ್ಪರಗಿ ಗ್ರಾಮ ಪಂಚಾಯತಿಯಲ್ಲಿ ಕೆಲಸ ನಿರ್ವಹಿಸಿರುವುದು ದಿ:27.11.2012 ರಿಂದ 10.06.2014 ರವರೆಗೆ, ಹೀಗಾಗಿ 2010-11 ರಿಂದ 2012 ರಿಂದ 2013 ರವರೆಗೆ ಆಯ್ಕೆ ಮಾಡಿರುವ ಫಲಾನುಭವಿಗಳ ಆಯ್ಕೆಯಲ್ಲಿ ನನ್ನ ಯಾವುದೇ ಪಾತ್ರ ಇರುವುದಿಲ್ಲ. ವಸತಿ ಯೋಜನೆಗಳ ಅರ್ಹ ಫಲಾನುಭವಿಗಳ ಆಯ್ಕೆ ಗ್ರಾಮ ಸಭೆಯಲ್ಲಿ ಜನರೇ ನೇರವಾಗಿ ಆಯ್ಕೆ ಮಾಡುತ್ತಾರೆ ವಿನಃ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಆಯ್ಕೆ ಮಾಡುವುದಿಲ್ಲ. 2013-14ನೇ ಸಾಲಿನಲ್ಲಿ ಬಸವ ಮತ್ತು ಇಂದಿರಾ ಆವಾಸ್ ವಸತಿ ಯೋಜನೆಗಳಲ್ಲಿ ಒಟ್ಟು 37 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, ಶ್ರೀಮತಿ ಶಾರದಾ ಬಾಯಿ, ಶ್ರೀಮತಿ ರಾಮವ್ವ ಶಂಕ್ರಪ್ಪ ಜಾಲವಾದಿ ಮತ್ತು ಶ್ರೀಮತಿ ಬಿ.ಬಿ ಫಾತೀಮಾ ಅಬ್ದುಲ್ ರಜಾಕ್ ರವರನ್ನು ದಿ:27.07.2013ರಂದು ಜರುಗಿದ ಗ್ರಾಮಸಭೆಯಲ್ಲಿ ನಿಯಮಗಳ ಪ್ರಕಾರ ಆಯ್ಕೆ ಮಾಡಲಾಗಿದೆ. ಸದರಿಯವರು ವಸತಿರಹಿತ, ಬಡತನ ರೇಖೆಗಿಂತ ಕೆಳಗಿನವರು ಹಾಗೂ ಈ ಹಿಂದೆ ವಸತಿ ಯೋಜನೆಯಲ್ಲಿ ಸೌಲಭ್ಯ ಹೊಂದದವರನ್ನೆ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲಾಗಿದೆ. ಸದರಿ ಪಟ್ಟಿಯನ್ನು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಅಧಿಕಾರಿಗಳು ಪರಿಶೀಲಿಸಿದ ನಂತರ ನಿಗಮದಿಂದ ಅನುಮೋದನೆಯಾಗಿ ಮನೆ ಮಂಜೂರಾಗಿರುತ್ತದೆ.
- In Central Administrative Tribunal- Delhi, Shri Harish K Dogra Vs Union of India, 22 July 2014 ರ ಪ್ರಕರಣದಲ್ಲಿ **burden** of proof on the applicant to prove his innocence, particularly **in respect** of Articles of Charges is violation of the well settled principle of **law that** the burden of proof in a disciplinary enquiry is on the **department/prosecution** (Central Bank of India V Karunamoy Banerjee, AIR 1968 SC 266, Sulhendra Chandra Das v. U.T of Tripura, AIR 1962 Tripura 15 and State of Bombay v Gajnan Mahadev, AIR 1954 Bombay 351) ಎಂದು ಸೂಚಿಸಲಾದರೂ ಸದರಿ ಸರ್ವೋಚ್ಚ ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಲಾಗಿದೆ. ದೂರುದಾರರಾಗಲಿ ಅಥವಾ ಅಪರ ನಿಬಂಧಕರಾಗಲಿ ಸದರಿ ಫಲಾನುಭವಿಗಳು ಆರ್ಥಿಕವಾಗಿ ಸ್ಥಿತಿವಂತರಿರುವ ಬಗ್ಗೆ, ಈ ಹಿಂದೆ ವಸತಿ ಯೋಜನೆಯಲ್ಲಿ ಮನೆ ಹೊಂದಿರುವ ಬಗ್ಗೆ ಯಾವುದೇ ದಾಖಲೆ ಅಥವಾ ಪುರಾವೆಗಳು ವಿಚಾರಣೆಯಲ್ಲಿ ಹಾಜರುಪಡಿಸಿ, ಆರೋಪ ಸಾಬೀತುಪಡಿಸುವಲ್ಲಿ ವಿಫಲರಾಗಿದ್ದಾರೆ. ಸದರಿ ಫಲಾನುಭವಿಗಳ ವಿಚಾರಣೆ ಹಾಗೂ ಪಾಟಿಸವಾಲು ಸಹ ಮಾಡಿರುವುದಿಲ್ಲ.

.....3

- Zunjarrao Bhikaji Nagarkar Vs U.O.I and others on 6 August, 1999 ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಯಾವ ಕಾಯ್ದೆಯಡಿಯಲ್ಲಿ ಯಾವ ನೌಕರನ ಆದೇಶ/ನಿರ್ಣಯ ಕೈಗೊಂಡಿರುತ್ತಾನೊ ಅಂತಹ ಕಾಯ್ದೆಯಲ್ಲಿ ಮೇಲ್ಮನವಿ ಘಟ್ಟದಲ್ಲಿ ನೌಕರನ ಆದೇಶ ಬದಲಾಯಿಸಲು ಅವಕಾಶ ಇರುವಾಗ ನೌಕರನನ್ನು ದಂಡಿಸುವ ಪ್ರಶ್ನೆಯೆ ಉದ್ಭವಿಸುವುದಿಲ್ಲ ಎಂದು ವ್ಯಾಖ್ಯಾನಿಸಲಾಗಿದೆ.
- ನಾನು ಸರ್ಕಾರಿ ಸೇವೆಗೆ ಯಾವುದೇ ಚ್ಯುತಿ ತರದೆ, ಪ್ರಾಮಾಣಿಕ, ನಿಷ್ಠೆ ಹಾಗೂ ಸೇವಾ ಮನೋಭಾವದಿಂದ ಕೆಲಸ ನಿರ್ವಹಿಸಿದ್ದು, ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡಿರುವುದಿಲ್ಲ. ಕಾರಣ ಮಾನ್ಯರು ನನ್ನ ಮೇಲಿನ ಎಲ್ಲಾ ಆರೋಪಗಳನ್ನು ಕೈ ಬಿಟ್ಟು ಆರೋಪ ಮುಕ್ತರನ್ನಾಗಿ ಮಾಡಿ ಆದೇಶ ಹೊರಡಿಸಬೇಕಾಗಿ ಕೋರಿರುತ್ತಾರೆ.

ಸದರಿ ಪ್ರಕರಣದ ಕುರಿತು ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ರವರು ವಿಚಾರಣೆ ನಡೆಸಿ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಆಪಾದಿತ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ವಿಚಾರಣಾ ವರದಿಯ ಪ್ರಮುಖ ಅಂಶಗಳನ್ನು ಈ ಕೆಳಕಂಡಂತೆ ಪುನರುಚ್ಚರಿಸಿದೆ:-

"30. The oral and the documentary evidence on record clearly show that from the year 2010 to 2013 the names of Smt. Sharada Bai, Smt. Laxmi Bai, Sri. Shankarapppa Basappa B. Patil, Sri. Walikar, Sri. Twachappa, Sri. Yelaguradappa Valasangi, Smt. Ramawwa Shankarappa Chalawadi, Smt. B.B. Fathima Abdul Razak were selected as beneficiaries though they were already having their own houses. Dhobighats and water tanks constructed in the year 2007-08 was not properly maintained by DGO. Therefore their condition was deteriorated. Entire expenses made towards dhobighats and water tanks and became useless.

31. In estimate administratively approval Number and date are not mentioned. DGO has not taken the approval and not furnished the measurement book for verification of engineer. In the estimate prepared for concrete road from the house of Asthi to the house of Hajeri, estimate was prepared. There is no mention regarding the administrative approval and technical approval. In the work order pertaining to CC road from Ganapathi Chowk to K. Salavadagi road, the date column is left blank. In estimate there is no mention regarding administrative approval and technical approval. In the face sheet of estimate regarding CC road from the house of Basavaraj Nandi to Muddebihal road, there is no mention regarding administrative approval and technical approval. Measurement book was not furnished to the engineer for verification. The DGO is a responsible public/servant for these discrepancies.

Thereby the DGO, being a Government/Public Servant has failed to maintain absolute integrity besides devotion to duty and acted in a manner unbecoming of a Government servant. Hence, I proceed to answer Point No.1 in the Affirmative."

ಸರ್ಕಾರವು ಪರಿಶೀಲಿಸಿ, ಈ ಹಿನ್ನೆಲೆಯಲ್ಲಿ, ಆಪಾದಿತರು ಎರಡನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಅಂಗೀಕರಿಸಲು ಬರುವುದಿಲ್ಲ ಮತ್ತು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪುವುದು ಸಮಂಜಸವೆಂದು ಕಂಡು ಬರುತ್ತದೆ. ಆದುದರಿಂದ ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ, ಶ್ರೀಮತಿ ಸಾವಿತ್ರಿ ಸಿದ್ದನಗೌಡ ಬಿರಾದಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೂವಿನ ಹಿಪ್ಪರಗಿ ಗ್ರಾಮ ಪಂಚಾಯತಿ, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) ರಿಂದ (iv) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ, ರೂ.1,20,000/- ಗಳ ಆರ್ಥಿಕ ನಷ್ಟವನ್ನು ಸದರಿ ನೌಕರರ ವೇತನ ಹಾಗೂ ಭತ್ಯೆಗಳಿಂದ ವಸೂಲು ಮಾಡುವ ಮತ್ತು ಸದರಿಯವರಿಗೆ ಬಡ್ತಿ ಕೊಡುವ ಸಮಯದಿಂದ ನಾಲ್ಕು ವರ್ಷಗಳ ಅವಧಿಗೆ ಅವರ ಬಡ್ತಿಯನ್ನು ತಡೆಹಿಡಿಯುವ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

.....4

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 732 ಗ್ರಾಪಂಕಾ 2016, ಬೆಂಗಳೂರು, ದಿನಾಂಕ: 10.07.2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿನ ಶಿಫಾರಸ್ಸಿನನ್ವಯ, ಶ್ರೀಮತಿ ಸಾವಿತ್ರಿ ಸಿದ್ದನಗೌಡ ಬಿರಾದಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೂವಿನ ಹಿಪ್ಪರಗಿ ಗ್ರಾಮ ಪಂಚಾಯತಿ, ಬಸವನ ಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) ರಿಂದ (iv) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ, ರೂ.1,20,000/- ಗಳ ಆರ್ಥಿಕ ನಷ್ಟವನ್ನು ಸದರಿ ನೌಕರರ ವೇತನ ಹಾಗೂ ಭತ್ಯೆಗಳಿಂದ ವಸೂಲು ಮಾಡುವ ಮತ್ತು ಸದರಿಯವರಿಗೆ ಬಡ್ತಿ ಕೊಡುವ ಸಮಯದಿಂದ ನಾಲ್ಕು ವರ್ಷಗಳ ಅವಧಿಗೆ ಅವರ ಬಡ್ತಿಯನ್ನು ತಡೆಹಿಡಿಯುವ (Withholding four annual increments with cumulative effect, Recovering financial loss of Rs.1,20,000/- from the salary and allowances and Deferring the promotion by four years, whenever she becomes due for promotion) ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

10/7

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ವಿಜಯಪುರ ಜಿಲ್ಲಾ ಪಂಚಾಯತಿ, ವಿಜಯಪುರ.
6) ಕಾರ್ಯನಿರ್ವಾಹಕ ಅಧಿಕಾರಿ, ಬಸವನ ಬಾಗೇವಾಡಿ ತಾಲ್ಲೂಕು ಪಂಚಾಯತಿ, ಬಸವನ ಬಾಗೇವಾಡಿ, ವಿಜಯಪುರ ಜಿಲ್ಲೆ. (ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)
7) ಶ್ರೀಮತಿ ಸಾವಿತ್ರಿ ಸಿದ್ದನಗೌಡ ಬಿರಾದಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮೂಖಿಹಾಳ ಗ್ರಾಮ ಪಂಚಾಯತಿ, ಮುದ್ದೇಬಿಹಾಳ ತಾಲ್ಲೂಕು, ವಿಜಯಪುರ ಜಿಲ್ಲೆ.
8) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.